

**ಶಾಲಾ, ಕಾಲೇಜುಗಳಲ್ಲಿ ಆಪ್ತ ಸಮಾಲೋಚನೆ ಅತ್ಯಂತ ಅಗತ್ಯವಿದೆ. ಆದರೆ ಆದರ ಅಗತ್ಯ ತಮಗೆ ಇದೆ ಎಂದು ವಿದ್ಯಾರ್ಥಿಗಳಲ್ಲಿ ಅನ್ನಿಸದಿದ್ದರೆ ಏನು ಮಾಡೋಣ?**

■ ಮಂಜುಳಾರಾಜ್

ಯುವ ಮನಸ್ಸು ಚೈತನ್ಯದ ಚಿಲುಮೆ. ಹರೆಯ ಎಂದರೆ ಕನಸುಗಳನ್ನು ಕಾಣುವ ಸಮಯ. ಬಿಸಿಲು ಕುದುರೆಯ ಬೆನ್ನೇರಿದ ಸವಾರಿ. ಎಲ್ಲವನ್ನೂ ಸಾಧಿಸಬೇಕೆಂಬ ಆಸೆ. ಎಲ್ಲದರ ಬಗ್ಗೆ ಕುತೂಹಲ. ಆಗ ಜೀವನವೆಲ್ಲ ಸುಂದರ. ಆಗಷ್ಟೇ ಅರಳಿದ ಹೂವಿನಲ್ಲಿ ಹೊಳಪು, ಸುವಾಸನೆ, ತಾಜಾತನ ಎದ್ದು ಕಂಡಂತೆ.

### ಹದಿಹರೆಯ ಅಂದರೇನು?

ಬಾಲ್ಯದಿಂದ ಪ್ರೌಢಾವಸ್ಥೆಗೆ ತಲುಪುವ ಮುಂಚೆಗಿನ ಒಂದು ಹಂತ. ಬಾಲ್ಯದಿಂದ ವಯಸ್ಕತನಕ್ಕೆ ಬದಲಾವಣೆಯ ಸಮಯ. ಈ ಹಂತದಲ್ಲಿ ದೈಹಿಕ ಮತ್ತು ಮಾನಸಿಕ ಬದಲಾವಣೆಗಳಾಗುತ್ತವೆ. ಈ ಬದಲಾವಣೆಯ ಹಂತದಲ್ಲಿ ಹದಿಹರೆಯದವರು ತುಂಬ ಸೂಕ್ಷ್ಮ ಮನಸ್ಸಿನವರಾಗಿ ಬಿಡುತ್ತಾರೆ. ಅನೇಕ ಬಾರಿ ತಮ್ಮಲ್ಲಿನ ಆತ್ಮವಿಶ್ವಾಸವನ್ನು ಕಳೆದುಕೊಂಡು ಬಿಡುತ್ತಾರೆ. ನಾಚಿಕೆ ಶುರುವಾಗುತ್ತದೆ, ಬಹಳ ಬೇಗ ಸಿಟ್ಟು ಬಂದು ಬಿಡುತ್ತದೆ.

ಈ ಸಮಯದಲ್ಲಿ ಅವರಿಗೆ ಹೆಚ್ಚು ಸ್ನೇಹಿತರಾಗುತ್ತಾರೆ. ಅವರ ಸಾಮಾಜಿಕ ವಲಯವೂ ಬೆಳೆಯುತ್ತದೆ. ತಮ್ಮನ್ನು ತಾವು ರೂಪಿಸಿಕೊಳ್ಳುವಲ್ಲಿ, ತಮ್ಮದೊಂದು ಐಡೆಂಟಿಟಿ ಕಂಡುಕೊಳ್ಳುವ ಹಂತದಲ್ಲಿ ತಮ್ಮ ಸ್ನೇಹಿತರಿಂದ ಬಹಳ



ವಿನ್ಯಾಸ: ದಿಲ್